ಹೈವೇ ಪಕ್ಕದಲ್ಲಿ ಕಟ್ಟಡದ ಅವಶೇಷ (ಡೆಬ್ರಿಸ್)ಗಳನ್ನು ಲಾರಿಗಳಲ್ಲಿ ತಂದು ಫುಟ್‌ಪಾತ್‌ಗಳಲ್ಲಿ ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಇದರಿಂದ ಸಾರ್ವಜನಿಕರಿಗೆ ಆಗಿರತಕ್ಕಂತ ತೊಂದರೆ ನಿವಾರಣೆ ಮಾಡಲು ನಗರ ಪಾಲಿಕೆ ಮತ್ತು ನಗರ ಸಭೆಗಳು ತೆಗೆದುಕೊಂಡ ಕಾನೂನು ಕ್ರಮಗಳೇನು ;

ಇ. ಈ ವಿಷಯಕ್ಕೆ ಸಂಬಂಧಿಸಿದಂತೆ ಎಷ್ಟು ಲಾರಿ ಮಾಲೀಕರುಗಳ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲಾಗಿದೆ (ಪೂರ್ಣ ವಿವರಗಳನ್ನೊದಗಿಸುವುದು) ?

ಶ್ರೀ ಧರ್ಮಸಿಂಗ್ ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಹೌದು

ಆ. ಎಲ್ಲೆಂದರಲ್ಲಿ ಡೆಬ್ರಿಸ್‌ನ್ನು ಹಾಕದಿರಲು ನಿಗಾ ವಹಿಸುವಂತೆ ನಗರ ಪಾಲಿಕೆ ಸಿಬ್ಬಂದಿಗೆ ಹಾಗೂ ನಗರ ಸಭೆಗಳ ಆಯುಕ್ತರುಗಳಿಗೆ ತಿಳಿಸಿದೆ.

ಇ. ಮಧ್ಯರಾತ್ರಿ ವೇಳೆಯಲ್ಲಿ ಹಾಗೂ ನಗರ ಪಾಲಿಕೆ ಸಿಬ್ಬಂದಿಗಳ ಗಮನಕ್ಕೆ ಬಾರದೆ ತ್ಯಾಜ್ಯ ವಸ್ತುಗಳನ್ನು ಸುರಿದು ಹೋಗುವುದರಿಂದ ಅಂತಹ ಲಾರಿಗಳನ್ನು ಕಂಡುಹಿಡಿಯಲು ಸಾಧ್ಯವಾಗಿರುವುದಿಲ್ಲ.

1549(2155) ಶ್ರೀ ಅಶೋಕ್ ಆರ್. ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಉತ್ತರಹಳ್ಳಿ ಕ್ಷೇತ್ರ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಮಲ್ಲಸಂದ್ರ ಗ್ರಾಮದಲ್ಲಿ ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ. ಅಕ್ರಮವಾಗಿ ಗಣಿಗಾರಿಕೆ ಮಾಡುವವರ ವಿರುದ್ಧ ತೆಗೆದುಕೊಂಡ ಕಾನೂನು ಕ್ರಮಗಳೇನು?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ. ಹೌದು.

ಆ. ಅಕ್ರಮ ಕಟ್ಟಡ ಕಲ್ಲು ಗಣಿಗಾರಿಕೆಯನ್ನು ತಡೆಗಟ್ಟಲು ಕಂದಾಯ ಇಲಾಖೆ ಮತ್ತು ಪೋಲೀಸ್ ಇಲಾಖೆಯ ಸಹಕಾರದೊಂದಿಗೆ ಕ್ರಮ ಕೈಗೊಳ್ಳಲಾಗಿದೆ. ಹಾಗೂ 2004–05ರವರೆಗೆ 6 ಅಕ್ರಮ ಕಲ್ಲು ಗಣಿಗಾರಿಕೆ ಪ್ರಕರಣಗಳಿಂದ ರೂ.84,000–00 ದಂಡ ವಸೂಲು ಮಾಡಿದೆ.

1550 (2156) ಶ್ರೀ ಆರ್.ಅಶೋಕ್.ಎಂಎಲ್‌ಎ ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಬರುವಂತ ವೃಷಭಾವತಿ ನಾಲೆಗೆ ಅಮರ ಜ್ಯೋತಿನಗರ ಮತ್ತು ಮೂಡಲ ಪಾಳ್ಯ ವಾರ್ಡ್‌ಗಳಲ್ಲಿ ಕಟ್ಟಲು ಯೋಜಿಸಿರುವ ಸೇತುವೆಗಳ ಸಂಖ್ಯೆ ಎಷ್ಟು ಮತ್ತು ಅದರ ಅಂದಾಜು ವೆಚ್ಚ ಎಷ್ಟು ;

ಆ. ಯಾವಾಗ ಈ ಕಾಮಗಾರಿ ಪ್ರಾರಂಭ ಮಾಡಲಾಗುವುದು ;

ಇ. ಈ ಸೇತುವೆ ನಿರ್ಮಾಣ ಮಾಡಲು ವಿಳಂಬವಾಗಿರಲು ಕಾರಣವೇನು ;